TATA ETHICAL FUND
(An Open-ended Equity Scheme)

TATA MUTUAL FUND
Expertise that's trusted



# “ನಾನೆಷ್ಟು ಸಂಪಾದಿಸುತ್ತೇನೆ ಎಂಬಷ್ಟೇ ಮುಖ್ಯ ಹೇಗೆ ಸಂಪಾದಿಸುತ್ತೇನೆ ಎಂಬುದು.”

ಈ ಕೆಳಗಿನವುಗಳನ್ನು ಬಯಸುತ್ತಿರುವ ವಿನಿಯೋಜಕಗಾಗಿ ಈ ಪ್ರಾಡಕ್ಟ್ ಸೂಕ್ತವಾಗಿದೆ# :

- ದೀರ್ಘಾವಧಿಯಲ್ಲಿ ಮೂಲಧನ ವೃದ್ಧಿ
- ಶಾರಿಯಾ ಪ್ರಿನ್ಸಿಪಲ್ಸ್‌ಗೆ ಅನುರೂಪವಾಗಿರುವ ಕಂಪೆನಿಗಳ ಇಕ್ವಿಟಿ ಹಾಗೂ ಇಕ್ವಿಟಿಗೆ ಸಂಬಂಧಿಸಿದ ಇನ್‌ಸ್ಟ್ರುಮೆಂಟ್‌ಗಳಲ್ಲಿ ಮತ್ತು ಶಾರಿಯಾ ಪ್ರಿನ್ಸಿಪಲ್ಸ್‌ನ ಅಂತರ್ಗತ ಸಮ್ಮತವಾಗಿರುವ ಇತರ ಇನ್‌ಸ್ಟ್ರುಮೆಂಟ್‌ಗಳಲ್ಲಿ ವಿನಿಯೋಜನೆ
- ಈ ಸ್ಕೀಮ್‌ನ್ನು **ಹೈ ರಿಸ್ಕ್** ■ **(ಬ್ರೌನ್)** ಎಂದು ವರ್ಗೀಕರಿಸಲಾಗಿದೆ. ತಮ್ಮ ಮೂಲಧನವು ಅಪಾರ ಅಪಾಯಕ್ಕೆ ತುತ್ತಾಗಬಹುದು ಎಂದು ವಿನಿಯೋಜಕರು ತಿಳಿದಿರುತ್ತಾರೆ.

**#ಪ್ರಾಡಕ್ಟ್ ತಮಗೆ ಯೋಗ್ಯವಾಗಿದೆಯೇ ಎಂಬುದನ್ನು ಅರಿಯಲು ವಿನಿಯೋಜಕರು ತಮ್ಮ ಆರ್ಥಿಕ ಸಲಹೆಗಾರರ ಬಳಿ ವಿಚಾರ-ವಿಮರ್ಷೆ ಮಾಡಿಕೊಳ್ಳಬೇಕು.**

**ಸೂಚನೆ :** ಅಪಾಯ ಸಾಧ್ಯತೆಯನ್ನು ಈ ರೀತಿಯಲ್ಲಿ ಪ್ರತಿನಿಧೀಕರಿಸಲಾಗುತ್ತದೆ :

(ಬ್ರೌನ್) ತಮ್ಮ ಮೂಲಧನವು ಅಪಾರ ಅಪಾಯಕ್ಕೆ ತುತ್ತಾಗಬಹುದು ಎಂದು ವಿನಿಯೋಜಕರು ತಿಳಿದಿರುತ್ತಾರೆ.

(ಎಲ್ಲೊ) ತಮ್ಮ ಮೂಲಧನವು ಮಧ್ಯಮ ಅಪಾಯಕ್ಕೆ ತುತ್ತಾಗಬಹುದು ಎಂದು ವಿನಿಯೋಜಕರು ತಿಳಿದಿರುತ್ತಾರೆ.

(ಬ್ಲೂ) ತಮ್ಮ ಮೂಲಧನವು ಕಡಿಮೆ ಅಪಾಯಕ್ಕೆ ತುತ್ತಾಗಬಹುದು ಎಂದು ವಿನಿಯೋಜಕರು ತಿಳಿದಿರುತ್ತಾರೆ.

**ಮ್ಯೂಚ್ಯುವಲ್ ಫಂಡ್ ವಿನಿಯೋಜನೆಗಳು ಮಾರುಕಟ್ಟೆಯ ಅಪಾಯಗಳಿಗೆ ಬದ್ಧವಾಗಿವೆ, ಸ್ಕೀಮ್‌ಗೆ ಸಂಬಂಧಿಸಿದ ಎಲ್ಲಾ ದಸ್ತಾವೇಜುಗಳನ್ನು ಎಚ್ಚರಿಕೆಯಿಂದ ಓದಿರಿ.**

## ವಿನಿಯೋಜನೆಯ ತತ್ವಜ್ಞಾನ

ಟಾಟಾ ಎಥಿಕಲ್ ಫಂಡ್, ಇದು ವೈವಿಧ್ಯಪೂರ್ಣ ಇಕ್ವಿಟಿ ಫಂಡ್ ಆಗಿದ್ದು ವಿನಿಯೋಜನೆಯು ಶಾರಿಯಾ ಪ್ರಿನ್ಸಿಪಲ್‌ಗೆ ಅನುರೂಪವಾಗಿರುವ ಸ್ಟಾಕ್‌ಗಳಲ್ಲಿ ವಿನಿಯೋಜಿಸುವ ಉದ್ದೇಶವನ್ನು ಹೊಂದಿದೆ. ವಿನಿಯೋಜನೆಯಲ್ಲಿ ಶಾರಿಯಾ ಧ್ಯೇಯಗಳೊಂದಿಗೆ ಸಮನ್ವಯವನ್ನು ಹೊಂದಿರುವ ಕಂಪೆನಿಗಳ ಪೋರ್ಟ್‌ಫೋಲಿಯೋವನ್ನು ರಚಿಸಲಿಕ್ಕಾಗಿ ಸ್ಟಾಕ್‌ಗಳನ್ನು ಆರಿಸಲು, ಫಂಡ್ ಬಾಟಮ್ ಅಪ್ ಮಾದರಿಯನ್ನು ಅನುಕರಿಸುತ್ತದೆ. ನೀತಿಬದ್ಧತೆಯ ಕೊರತೆಯುಳ್ಳವೆಂದು ವರ್ಗೀಕರಿಸಲ್ಪಟ್ಟ ಕಂಪೆನಿಗಳಲ್ಲಿ ವಿನಿಯೋಜನೆಯನ್ನು ಟಾಟಾ ಎಥಿಕಲ್ ಫಂಡ್ ನಿಷೇಧಿಸುತ್ತದೆ. ಉದಾಹರಣೆಗೆ ಹೊಗೆಸೊಪ್ಪು, ಆಲ್ಕೊಹಾಲ್, ಗ್ಯಾಂಬ್ಲಿಂಗ್, ಲಾಟರಿ, ಬ್ಯಾಂಕಿಂಗ್ ಹಾಗೂ ಫೈನಾನ್ಸ್ ಸರ್ವಿಸಸ್‌ಗೆ ಸಂಬಂಧಿಸಿದ ಮತ್ತು ಇತರ ನಿಷೇಧಿತ ಕಂಪೆನಿಗಳು.

## ಶಾರಿಯಾ ವಿನಿಯೋಜನೆಗಳು

**ಶಾರಿಯಾ ಅಂದರೇನು ?**

ಶಾರಿಯಾ ಅಂದರೆ ನೀತಿ ಸಂಹಿತೆ ಹಾಗೂ ಇಸ್ಲಾಮ್‌ನ ಧಾರ್ಮಿಕ ಕಾನೂನು. ಜಾತ್ಯಾತೀತ ಕಾನೂನು ಪಾಲಿಸುತ್ತಿರುವ ಹಲವಾರು ವಿಷಯಗಳೊಂದಿಗೆ ಶಾರಿಯಾ ಕಾರ್ಯವೆಸಗುತ್ತದೆ. ಇದರಲ್ಲಿ ಸೇರಿವೆ ಅಪರಾಧ, ರಾಜನೀತಿ ಮತ್ತು ಆರ್ಥಿಕತೆ ಮಾತ್ರವಲ್ಲ ಶುಚಿತ್ವ, ಆಹಾರಾಭ್ಯಾಸ, ಪ್ರಾರ್ಥನೆ ಮತ್ತು ಉಪವಾಸದಂಥ ವ್ಯಕ್ತಿಗತ ಸಂಗತಿಗಳು. ಶಾರಿಯಾ ಧ್ಯೇಯಗಳು ವಿನಿಯೋಜನೆಗಾಗಿ ಕೆಲವೊಂದು ಮಾನದಂಡಗಳನ್ನು ಅಪೇಕ್ಷಿಸುತ್ತದೆ ಮತ್ತು ಸಾರ್ವಜನಿಕ ಆವಶ್ಯಕತೆ, ವ್ಯವಹಾರದಲ್ಲಿ ಸಾತ್ವಿಕತೆ ಮತ್ತು ಆದಾಯದ ನೀತಿಬದ್ಧ ಮೂಲಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಸೋಸಿ ಪಡೆಯುತ್ತದೆ.

**ಶಾರಿಯಾ ಆಧಾರಿತ ವಿನಿಯೋಜನೆಗಳ ಪ್ರಮುಖ ವೈಶಿಷ್ಟ್ಯಗಳು :**

**ಸೆಕ್ಟರ್ ಆಧಾರಿತ ಫಿಲ್ಟರ್‌ಗಳು :**

**ಶಾರಿಯಾ ಧ್ಯೇಯಗಳ ಅನುಸಾರ ಈ ಕೆಳಗಿನವುಗಳಿಗೆ ಸಂಬಂಧಿಸಿದ ಕೆಲವು ಬಿಸ್‌ನೆಸ್‌ಗಳನ್ನು ಹೊರತುಪಡಿಸಬೇಕಾಗುತ್ತದೆ :**

- ಆಲ್ಕೊಹಾಲ್, ಹೊಗೆಸೊಪ್ಪು
- ಬ್ಯಾಂಕಿಂಗ್ ಉದ್ಯಮದಂಥ, ಬಡ್ಡಿ ನೀಡುವ ಮತ್ತು ಪಡೆಯುವ ವ್ಯವಹಾರದಲ್ಲಿ ತೊಡಗಿರುವ ಕಂಪೆನಿಗಳು
- ಗೇಮಿಂಗ್/ಗ್ಯಾಂಬ್ಲಿಂಗ್/ಕ್ಯಾಸಿನೋ/ಚಾನ್ಸ್‌ನ ಆಟಗಳು
- ನಾನ್-ಹಲಾಲ್ ಆಹಾರ ಪದಾರ್ಥಗಳು
- ಪೊರ್ನೊಗ್ರಾಫಿ ಅಥವಾ ವಯಸ್ಕರಿಗೆ ಮಾತ್ರವಾದ ವಿಷಯ-ವಸ್ತುವಿಗೆ ಸಂಬಂಧಿಸಿದ ಎಂಟರ್‌ಟೇನ್‌ಮೆಂಟ್ ಹಾಗೂ ಲೀಶರ್

**ಆರ್ಥಿಕ ಅನುಪಾತದ ಮೇಲೆ ಆಧಾರಿತ ಫಿಲ್ಟರ್‌ಗಳು :**

- ತಮ್ಮ ಲೆಕ್ಕ ಪುಸ್ತಕಗಳಲ್ಲಿ ಅಧಿಕ ಡೆಬ್ಟ್ ಹೊಂದಿರುವ ಕಂಪೆನಿಗಳನ್ನು ಸೋಸಿ ತೆಗೆಯಲಾಗುತ್ತದೆ
- ಬಡ್ಡಿಯ ಆದಾಯದಂಥ ಶಾರಿಯಾ ಅನುಮೋದನೆಗೆ ವ್ಯತಿರಿಕ್ತವಾದ ಚಟುವಟಿಕೆಗಳಲ್ಲಿ ತೊಡಗಿರುವ ಕಂಪೆನಿಗಳನ್ನು ದೂರವಿರಿಸಲಾಗುತ್ತದೆ.
- ನಗದು, ಬರಲಿರುವ ಬಾಕಿ, ವಿನಿಯೋಜನೆಗಳು ಮತ್ತು ಸಾಲಗಾರರು ನಿಗದಿತ ಸೀಮೆಯಲ್ಲಿ ಇರಬೇಕು.

## ಟಾಟಾ ಎಥಿಕಲ್ ಫಂಡ್ ಏಕೆ ?

**ಶಾರಿಯಾ ಅನುಮೋದಿತ ಸ್ಟಾಕ್‌ಗಳಲ್ಲಿ ಹಂಚಿ ಹಾಕಲಾಗಿರುವ ಪೋರ್ಟ್‌ಫೋಲಿಯೊ**

- ಜಗದಾದ್ಯಂತದ 29 ಸೆಕ್ಟರ್‌ಗಳ ಸುಮಾರು 200 ಸ್ಟಾಕ್‌ಗಳಿಂದ ಶಾರಿಯಾ ಅನುಮೋದಿತ ಸ್ಟಾಕ್‌ಗಳ ಹಂಚಿ ಹಾಕಲಾಗಿರುವ ಪೋರ್ಟ್‌ಫೋಲಿಯೋ.
- ಯಾವುದೇ ಮಾರ್ಕೆಟ್ ಕ್ಯಾಪ್ ಪಕ್ಷಪಾತವನ್ನು ಫಂಡ್ ಅನುಕರಿಸುವುದಿಲ್ಲ.
- ಸ್ಟಾಕ್‌ನ ಆಯ್ಕೆಯ ಬಾಟಮ್-ಅಪ್ ಪದ್ಧತಿ.

**ಲಿವರೇಜ್ ಸಹಿತ, ಮೂಲತಃ ಶಕ್ತಿಶಾಲಿಯಾಗಿರುವ ಸ್ಟಾಕ್‌ಗಳ ಪೋರ್ಟ್‌ಫೋಲಿಯೋ**

- ಬಡ್ಡಿ ಗಳಿಸುವ ಡೆಬ್ಟ್‌ಗಳನ್ನು ಬಳಸಿ ತನ್ನ ಮೂಲಧನ ಮೂಲದ 30%ಗಿಂತ ಕಡಿಮೆಯನ್ನು ಹೊಂದಿರುವ ಕಂಪೆನಿಗಳಲ್ಲಿ ವಿನಿಯೋಜನೆ.
- ಇಂಥ ಕಂಪೆನಿಗಳಿಗೆ ತಮ್ಮ ಅಭಿವೃದ್ಧಿಗಾಗಿ ಸಹಾಯಕ್ಕೊದಗಲು ಸಾಮಾನ್ಯವಾಗಿ ಭಾರೀ ಪ್ರಮಾಣದಲ್ಲಿ ಬಾಹ್ಯ ಡೆಬ್ಟ್‌ನ ಆವಶ್ಯಕತೆ ಇರುವುದಿಲ್ಲ - ಆಂತರಿಕ ನಗದು ಪ್ರಾಪ್ತಿಯ ಕ್ಷಮತೆ ಅಪಾರ.
- ಸದ್ಯದ ಮಾರುಕಟ್ಟೆಯಲ್ಲಿ ಅನುಭವಿಸಲಾಗುವಂಥ ಬಾಹ್ಯ ಲಿಕ್ವಿಡಿಟಿ ಪರಿಸ್ಥಿತಿ ಹೇಗಿದ್ದರೂ ಅಭಿವೃದ್ಧಿ ಸಾಧಿಸುವ ಉತ್ತಮ ಕ್ಷಮತೆ.

**ಮೂಲಭೂತವಾಗಿ ಶಕ್ತಿಶಾಲಿಯಾಗಿರುವ ಕಂಪೆನಿಗಳ ಪೋರ್ಟ್‌ಫೋಲಿಯೋ**

ಪೋರ್ಟ್‌ಫೋಲಿಯೋದಲ್ಲಿ ಈ ಪ್ರಕಾರದ ಕಂಪೆನಿಗಳಿವೆ :

- ಅಪಾರ ನಗದು ಉತ್ಪಾದಕ
- ಅಪಾರ ಮೂಲಧನ ಸಕ್ಷಮತೆ
- ಉತ್ತಮ ಆದಾಯ ಗಳಿಕೆಯ ಭವಿಷ್ಯ

**ಕಟ್ಟುನಿಟ್ಟಾಗಿ ಶಾರಿಯಾ ಧ್ಯೇಯಗಳ ಪಾಲನೆ**

- ಶಾರಿಯಾ ಧ್ಯೇಯಗಳನ್ನು ಪಾಲಿಸುತ್ತಿರುವುದನ್ನು ಪರಿಶೀಲಿಸುತ್ತಿರಲು ಸ್ವತಂತ್ರ ಸಲಹೆಗಾರರಿಂದ ಕಟ್ಟುನಿಟ್ಟಾಗಿ ಪೋರ್ಟ್‌ಫೋಲಿಯೋ ಮಾನಿಟರಿಂಗ್
- ಯಾವುದೇ ರೀತಿಯಲ್ಲಿ ದಾರಿ ತಪ್ಪಿದ್ದಲ್ಲಿ ನಿಗದಿತ ಕಾಲಾವಧಿಯ ಒಳಗೆ ತಿದ್ದುಪಡಿ ಮಾಡುವಿಕೆ.
- ನಿಷೇಧಿತ ಆದಾಯದ ಸಂದರ್ಭದಲ್ಲಿ ಶುದ್ಧೀಕರಣ ಪ್ರಕ್ರಿಯೆ ಸಿದ್ಧವಿದೆ.

## ಯಾರು ವಿನಿಯೋಜನೆ ಮಾಡಬೇಕು ಮತ್ತು ಯಾಕೆ?

- ಶಾರಿಯಾ ಅನುಮೋದಿತ ಇಕ್ವಿಟಿ ಹಾಗೂ ಇಕ್ವಿಟಿಗಳಿಗೆ ಸಂಬಂಧಿಸಿದ ಇನ್‌ಸ್ಟ್ರುಮೆಂಟ್‌ಗಳಲ್ಲಿ ವಿನಿಯೋಜಿಸಲು ಬಯಸುವ ವಿನಿಯೋಜಕರು.
- ನೀತಿ ಸಮ್ಮತವೆಂದು ಪರಿಗಣಿಸಲಾಗುವ ವ್ಯವಹಾರಗಳಲ್ಲಿ ತೊಡಗಿರುವ ಸಾಮಾಜಿಕವಾಗಿ ದಾಯಿತ್ವವನ್ನು ಪಾಲಿಸುವ ಕಂಪೆನಿಗಳಲ್ಲಿ ವಿನಿಯೋಜನೆ.
- ತೀರಾ ಕಡಿಮೆ ಲೀವರೇಜ್ ಹಾಗೂ ಮೂಲತಃ ಶಕ್ತಿಶಾಲಿಯಾಗಿರುವ ಕಂಪೆನಿಗಳಲ್ಲಿ ಹಣ ತೊಡಗಿಸಲು ಆದ್ಯತೆ ನೀಡುತ್ತಿರುವ ವಿನಿಯೋಜಕರು.
- ದೀರ್ಘಾವಧಿಯಲ್ಲಿ ಸೊತ್ತನ್ನು ನಿರ್ಮಿಸಿಕೊಳ್ಳಲಿಕ್ಕಾಗಿ ವಿನಿಯೋಜನೆಯ ಮಾರ್ಗವನ್ನು ಹುಡುಕುತ್ತಿದ್ದು ಮಧ್ಯಮದಿಂದ ತೀವ್ರ ಅಪಾಯವನ್ನು ಸಹಿಸಿಕೊಳ್ಳಲು ಹಿಂಜರಿಯದ ಹಾಗೂ 3 ವರ್ಷ ಹಾಗೂ ಅದಕ್ಕೂ ಮೀರಿದ ಇನ್ವೆಸ್ಟ್‌ಮೆಂಟ್ ಹೊರೈಜನ್ ಬಯಸುವ ಇಕ್ವಿಟಿ ವಿನಿಯೋಜಕರು.

ವಿತರಕರು :